ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ,
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ವಿಶೇಷ ವಿಭಾಗ, ನಜರ್‌ಬಾದ್, ಮೈಸೂರು.
E-mail:eepwdspecialmysuru@gmail.com Phone No. & Fax No. 0821 2492297

ನಂ.ಕಾಇಂ:ಲೋಇ:ವಿವಿ:ಮೈ:ತಾಂತ್ರಿಕ:ಸ.ಇಂ–2:ಕಟ್ಟಡ ಸುರಕ್ಷತೆ:2025–26 2305-06 ದಿನಾಂಕ: 2/12/25

ರವರಿಗೆ

ಪ್ರಾಂಶುಪಾಲರು
ಜೆ.ಎಸ್.ಎಸ್. ಪಬ್ಲಿಕ್ ಶಾಲೆ,
ಜೆ.ಪಿ.ನಗರ 2ನೇ ಹಂತ,
ಮೈಸೂರು.

ಮಾನ್ಯರೇ,

ವಿಷಯ: ಮೈಸೂರು ನಗರದ ಜೆ.ಪಿ.ನಗರ 2ನೇ ಹಂತದಲ್ಲಿರುವ ಜೆ.ಎಸ್.ಎಸ್.ಪಬ್ಲಿಕ್ ಶಾಲಾ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಅಪರ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರುರವರ ಸುತ್ತೋಲೆ ಸಂಖ್ಯೆ:ಲೋಇ:59:ಬಿಇಡಿ:2019 ದಿನಾಂಕ: 06.05.2022
2. ಸರ್ಕಾರದ ಅಪರ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರುರವರ ಸುತ್ತೋಲೆ ಸಂಖ್ಯೆ:ಲೋಇ:59:ಬಿಇಡಿ:2019 ದಿನಾಂಕ: 25.09.2024
3. ತಮ್ಮ ಮನವಿ ಪತ್ರ ದಿನಾಂಕ: 29.09.2025
4. BUILD POINT Construction and Technologies, ಗಂಗೋತ್ರಿ ಲೇಔಟ್, ಮೈಸೂರು ರವರಿಂದ ಕಟ್ಟಡವನ್ನು ಟೆಸ್ಟ್ ಮಾಡಿರುವ ಬಗ್ಗೆ ವರದಿ ದಿನಾಂಕ: 14.11.2025
5. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1 ವಿಶೇಷ ಉಪವಿಭಾಗ, ಮೈಸೂರು ಇವರ ಕಛೇರಿ ಪತ್ರ ಸಂಖ್ಯೆ: 824 ದಿ: 26.11.2025 (ಈ ಕಛೇರಿ ಸ್ವೀಕೃತಿ ದಿ: 29.11.2025)

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(3)ರ ಪತ್ರದಲ್ಲಿ ತಾವು ಶಾಲಾ ಕಟ್ಟಡಕ್ಕೆ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡುವಂತೆ ಕೋರಿರುತ್ತೀರಿ. ಮುಂದುವರೆದು ಮೈಸೂರು ನಗರದ ಜೆ.ಪಿ.ನಗರ 2ನೇ ಹಂತದಲ್ಲಿರುವ ಜೆ.ಎಸ್.ಎಸ್.ಪಬ್ಲಿಕ್ ಶಾಲೆ, ಮೈಸೂರು ಕಟ್ಟಡವನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1 ವಿಶೇಷ ಉಪವಿಭಾಗ, ಮೈಸೂರುರವರು ದಿನಾಂಕ:17.11.2025 ರಂದು ಶಾಲೆಗೆ ಭೇಟಿ ನೀಡಿ ಪರಿವೀಕ್ಷಿಸಲಾಗಿದ್ದು, ಕಟ್ಟಡವು ಸುಸ್ಥಿತಿಯಲ್ಲಿರುವುದನ್ನು ಗಮನಿಸಿ ವರದಿ ನೀಡಿರುತ್ತಾರೆ.

ಸದರಿ ಶಾಲಾ ಕಟ್ಟಡದಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ ಎಂದು ಉಲ್ಲೇಖ(5)ರ ಪತ್ರದಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1 ವಿಶೇಷ ಉಪವಿಭಾಗ, ಮೈಸೂರು ರವರು ಈ ಕೆಳಕಂಡ ಮಾಹಿತಿಯನ್ನು ಸಲ್ಲಿಸುತ್ತಾ, ಕೆಲವು ಷರತ್ತುಗಳೊಂದಿಗೆ ಕಟ್ಟಡದ ಸುರಕ್ಷತ ಪ್ರಮಾಣ ಪತ್ರವನ್ನು ನೀಡಲು ಶಿಫಾರಸ್ಸು ಮಾಡಿರುತ್ತಾರೆ.

1. ಶಾಲಾ ಕಟ್ಟಡವು ನೆಲ + 2 ಅಂತಸ್ತು ಕಟ್ಟಡವಾಗಿದ್ದು, ಆರ್.ಸಿ.ಸಿ ಸ್ಲ್ಯಾಬ್ ಮತ್ತು ಬೀಮ್‌ಗಳಿಂದ ಕೂಡಿರುವ ಕಟ್ಟಡವಾಗಿರುತ್ತದೆ.
2. ಕಟ್ಟಡವನ್ನು 1993ನೇ ವರ್ಷದಲ್ಲಿ ಪೂರ್ಣಗೊಳಿಸಿರುವುದಾಗಿ ತಿಳಿಸಿದ್ದು, ಕಟ್ಟಡವು ಸುಸ್ಥಿತಿಯಲ್ಲಿರುವುದು ಕಂಡು ಬಂದಿರುತ್ತದೆ.
3. ಈ ಶಾಲೆಯಲ್ಲಿ ವಿದ್ಯಾರ್ಥಿಗಳ ಹಾಗೂ ಶಿಕ್ಷಕರು ಬಳಕೆಗಾಗಿ ಅಗತ್ಯವಿರುವಷ್ಟು ಶೌಚಾಲಯದ ವ್ಯವಸ್ಥೆ ಇರುತ್ತದೆ.

ಪು.ತಿ.ನೋ.,

ಮುಂದುವರೆದು BUILD POINT Construction and Technologies, (NABL ACREDITED TESTING LAB), ಗಂಗೋತ್ರಿ ಲೇಔಟ್, ಮೈಸೂರು ರವರಿಂದ ಕಟ್ಟಡದ ಸುರಕ್ಷತೆಗೆ ಸಂಬಂಧಿಸಿದಂತೆ, Ultrasonic Pulse Velocity Test and Rebound Hammer Test ಮಾಡಿ ಉಲ್ಲೇಖ(4)ರ ಪತ್ರದಲ್ಲಿ ವರದಿಯನ್ನು ನೀಡಿರುತ್ತಾರೆ. ಸದರಿ ಪರೀಕ್ಷೆಯಲ್ಲಿ ಕಟ್ಟಡವು ಉತ್ತಮ ಗುಣಮಟ್ಟದಿಂದ ಕೂಡಿರುವುದು ಕಂಡು ಬಂದಿರುತ್ತದೆ.

**ಶಾಲಾ ಆಡಳಿತ ಮಂಡಳಿಯು ಪಾಲಿಸಬೇಕಾದ ಕ್ರಮಗಳು:-**

1. ಸದರಿ ಶಾಲೆಗಳ ಕಟ್ಟಡವನ್ನು ಸೂಕ್ತ ದುರಸ್ಥಿಗಳೊಂದಿಗೆ ಪ್ರತಿ ವರ್ಷಕ್ಕೆ ನಿರ್ವಹಣೆ ಮಾಡಲು ಸೂಚಿಸಿದೆ.
2. ಸದರಿ ಶಾಲಾ ಛಾವಣಿ ಮೇಲೆ ಶೇಖರಣೆಯಾಗುವ ಕಸ ಕಡ್ಡಿಗಳನ್ನು ಕಾಲ ಕಾಲಕ್ಕೆ ಶುಚಿಗೊಳಿಸಲು ಹಾಗೂ ನೀರಿನ ಸ್ಪೌಟ್ಸ್‌ಗಳನ್ನು ಶುಚಿಯಾಗಿಡಲು ಸೂಚಿಸಿದೆ.
3. ಸದರಿ ಶಾಲಾ ಕಟ್ಟಡದ ಆವರಣದಲ್ಲಿ ಸುರಕ್ಷತ ನಿಯಮಗಳನ್ನು ಅಳವಡಿಸಲು ಸೂಚಿಸಿದೆ.
4. ಮುಂದುವರೆದು ಸದರಿ ಸುರಕ್ಷಣಾ ಪ್ರಮಾಣ ಪತ್ರದ ಅವಧಿಯಲ್ಲಿ, ಶಾಲೆಯ ತರಗತಿಗಳನ್ನು ವಿಸ್ತರಿಸಿದರೆ ಪುನಃ ಸುರಕ್ಷತಾ ಪ್ರಮಾಣ ಪತ್ರವನ್ನು ಪಡೆಯಲು ಸೂಚಿಸಿದೆ. ಶಾಲೆಯ ಕಟ್ಟಡದ ಮೇಲಂತಸ್ಥಿನಲ್ಲಿ ಬದಲಾವಣೆಗಳನ್ನು ತರಲು ಬಯಸಿದರೆ ಮಕ್ಕಳ ಹಿತ ದೃಷ್ಟಿಯಿಂದ ತಾಂತ್ರಿಕ ಸಲಹೆ ಪಡೆದು ಮುಂದುವರೆಯಲು ಸೂಚಿಸಲಾಗಿದೆ.
5. ಶಾಲಾ ಪರಿಮಿತಿಯನ್ನು ಶುಚಿಯಾಗಿ ಇಡುವುದು, ಶೌಚಾಲಯಗಳನ್ನು ಸ್ವಚ್ಛವಾಗಿ ಇಡುವುದು ಮತ್ತು ಮಳೆಯ ಸಂದರ್ಭಗಳಲ್ಲಿ ಛಾವಣಿಯಿಂದ ನೀರು ಸೋರದಂತೆ ಕ್ರಮ ವಹಿಸುವಂತೆ ತಿಳಿಸಿದೆ.

ಪ್ರಾಂಶುಪಾಲರು, ಜೆ.ಎಸ್.ಎಸ್.ಪಬ್ಲಿಕ್ ಶಾಲೆ, ಜೆ.ಪಿ.ನಗರ 2ನೇ ಹಂತ, ಮೈಸೂರುರವರು ಕರ್ನಾಟಕ ಸರ್ಕಾರದ ಅಧೀನ ಕಾರ್ಯದರ್ಶಿ, ಪ್ರಾಥಮಿಕ ಶಿಕ್ಷಣ ಇಲಾಖೆರವರ ಸುತ್ತೋಲೆ ಸಂಖ್ಯೆ:ಇಡಿ:43:ಪಿಜಿಸಿ:2022 ದಿನಾಂಕ: 18.05.2022 ಆದೇಶದಂತೆ ನಗರ ಪ್ರದೇಶದ ಶಾಲೆ/ಕಾಲೇಜು ಕಟ್ಟಡಗಳಿಗೆ ರೂ.5,000/- ಮತ್ತು ಜಿ.ಎಸ್.ಟಿ ಶುಲ್ಕ 900/- ಗಳನ್ನು ಇಂಡಿಯನ್ ಓವರ್‌ಸಿಸ್ ಬ್ಯಾಂಕ್, ಜೆ.ಪಿ.ನಗರ ಶಾಖೆ, ಮೈಸೂರು, ಡಿ.ಡಿ.ಸಂಖ್ಯೆ:077211 & 077212 ದಿನಾಂಕ: 01.12.2025 ರಂದು ಪಡೆದು ಈ ಕಛೇರಿಗೆ ನೀಡಿರುತ್ತಾರೆ. ಸದರಿ ಸಂಸ್ಥೆಯವರು ನೀಡಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1 ವಿಶೇಷ ಉಪವಿಭಾಗ, ಮೈಸೂರುರವರು ಕಟ್ಟಡವನ್ನು ಪರಿಶೀಲಿಸಿ, ಕಟ್ಟಡವು ಸದೃಡವಾಗಿರುವುದಾಗಿ ಉಲ್ಲೇಖ(5)ರ ಪತ್ರದಲ್ಲಿ ನೀಡಿರುವ ವರದಿಯನ್ನಾಧರಿಸಿ, ಕಾಲಕಾಲಕ್ಕೆ ಕಟ್ಟಡದ ನಿರ್ವಹಣೆಯನ್ನು ಕೈಗೊಳ್ಳುವ ಷರತ್ತಿಗೊಳಪಟ್ಟಂತೆ ಸದರಿ ಕಟ್ಟಡಕ್ಕೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1 ವಿಶೇಷ ಉಪವಿಭಾಗ, ಮೈಸೂರುರವರ ಶಿಫಾರಸ್ಸಿನಂತೆ ಸದರಿ ಕಟ್ಟಡಕ್ಕೆ **"01 ವರ್ಷಗಳ"** ಕಾಲಾವಧಿಗೆ ಅಂದರೆ ಈ ದಿನಾಂಕದಿಂದ 01 ವರ್ಷದವರೆವಿಗೆ ಚಾಲ್ತಿಯಲ್ಲಿರುವಂತೆ ಈ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲಾಗಿದೆ.

ತಮ್ಮ ವಿಶ್ವಾಸಿ,

ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ
ವಿಶೇಷ ವಿಭಾಗ, ಮೈಸೂರು.

National Accreditation Board for
Testing and Calibration Laboratories

NABL

# CERTIFICATE OF ACCREDITATION

# BUILDPOINT CONSTRUCTIONS AND TECHNOLOGIES PRIVATE LIMITED (TESTING DIVISION)

**has been assessed and accredited in accordance with the standard**

## ISO/IEC 17025:2017

## "General Requirements for the Competence of Testing & Calibration Laboratories"

**for its facilities at**

**DR. SRI SHIVARATHRI RAJENDRA HOSTEL BUILDING, NO. 12/1, KUKKARAHALLY, MYSURU, KARNATAKA, INDIA**

**in the field of**

## TESTING

**Certificate Number:** TC-16187

**Issue Date:** 02/06/2025 **Valid Until:** 16/05/2026

This certificate supersedes the Certificate No. TC-13702 with issue date 17/05/2024 in view of change in legal entity of the laboratory.

This certificate remains valid for the Scope of Accreditation as specified in the annexure subject to continued satisfactory compliance to the above standard & the relevant requirements of NABL.
(To see the scope of accreditation of thislaboratory, you may also visit NABL website www.nabl-india.org)

**Name of Legal Entity:** BUILDPOINT CONSTRUCTIONS AND TECHNOLOGIES PRIVATE LIMITED

**Signed for and on behalf of NABL**

Srikanth R
Director

N. Venkateswaran
Chief Executive Officer